# ಬೋಧನೆ ಹಾಗೂ ನವ-ಉದಾರವಾದಿ ಪ್ರಭುತ್ವ

## ಕೃಷ್ಣ ಕುಮಾರ

ನವ-ಉದಾರವಾದದ ಪ್ರಭುತ್ವದಡಿಡೆಯಲ್ಲಿ, ಶಿಕ್ಷಣ ಸಂಸ್ಥೆಗಳನ್ನು ಮಾರುಕಟ್ಟೆಯ ತತ್ತ್ವಗಳ ಆಧಾರದ ಮೇಲೆ ನಡೆಸಬಹುದೆಂಬ ಕಲ್ಪನೆಯು ಜನಪ್ರಿಯವಾಗಿದ್ದು,, ಸಹಜವೆಂಬಂತಾಗಿದೆ. ಈ ಫಲಿತಾಂಶ ಆಧಾರಿತ ಸಾಂಸ್ಥಿಕ-ಸಂಸ್ಕೃತಿಯ ಅತಿ ಹೆಚ್ಚಿನ ಭಾರವು ಶಿಕ್ಷಕರ ಮೇಲೆ ಬಿದ್ದಿದೆ. ಶಿಕ್ಷಕರು ತಮ್ಮ ಸಮಯದ ಬಹುಭಾಗವನ್ನು ತಮ್ಮದೇ ಆದ ಚಟುವಟಿಕೆಗಳನ್ನು ಅಧಿಕೃತವಾಗಿ ಯೋಜಿಸುವುದು, ವಿವರಿಸುವುದು, ಸಮರ್ಥಿಸುವುದು ಹಾಗೂ ಮೌಲ್ಯಮಾಪನ ಮಾಡುವುದರಲ್ಲೇ ಕಳೆಯಬೇಕಾಗಿದೆ.

"ನವ-ಉದಾರವಾದ" ಎಂಬ ಪದವೇ ನಮ್ಮ ಸಿಟ್ಟು, ಅಪನಂಬಿಕೆ ಹಾಗೂ ಗೊಂದಲಗಳನ್ನು ಹೀರಿಕೊಳ್ಳುವ ಸ್ಪಂಜಿನಂತೆ ಇದೆ. ಸಿಟ್ಟು ಎಂಬ ಸಂವೇದನೆಯನ್ನು ಮೊದಲುಗೊಂಡು ಈ ಮೂರನ್ನೂ ನಾವೀಗ ಗಮನಿಸೋಣ. 1980ರಿಂದ ಈಚೆಗೆ ನಾವು ಕಳೆದುಕೊಂಡಿರುವುದೆಲ್ಲವನ್ನು ನೆನಪಿಗೆ ತಂದುಕೊಂಡಾಗ ನವ-ಉದಾರವಾದವು ನಮ್ಮಲ್ಲಿ ಸಿಟ್ಟನ್ನು ಉಂಟುಮಾಡುತ್ತದೆ. ಒಂದು ವೃತ್ತಿಯಾಗಿ ಬೋಧನೆಯು ಅನುಭವಿಸುತ್ತಿದ್ದ ಸ್ವಾಯತ್ತತೆ ಮತ್ತು ಘನತೆ ಹಾಗೂ ಪ್ರಸ್ತುತವಾದದ್ದು ಎಂಬ ನಂಬಿಕೆಗೆ ವಿರುದ್ಧವಾಗಿ ವಾಸ್ತವ ಎಂದು ಭಾವಿಸಲಾದ ವಿಷಯಗಳನ್ನು ಸಂಶೋಧಿಸಲು ಅದು ಹೊಂದಿದ್ದ ಸ್ವಾತಂತ್ರ್ಯಕ್ಕೂ ಸಹ ಇದು ಧಕ್ಕೆಯುಂಟುಮಾಡಿದೆ ಎನ್ನಬಹುದು. ಕಳೆದುಕೊಂಡಿರುವ ವಿಷಯಗಳ ಕುರಿತ ನಮ್ಮ ಈ ತಿಳುವಳಿಕೆಯು ಶೈಕ್ಷಣಿಕ ಜೀವನ ಹಾಗೂ ಸಂಸ್ಥೆಗಳ ಸಾರಭೂತ ಅಂಶದ ಅವಿಭಾಜ್ಯ ಭಾಗವಾಗಿದ್ದ ಪೂರಕ ಸೇವೆಗಳು ಕ್ರಮೇಣ ಇಳಿಮುಖವಾಗಿರುವುದನ್ನೂ ಒಳಗೊಂಡಿದೆ. ನಮಗೆ ಅಭ್ಯಾಸವಾಗಿದ್ದ ವೃತ್ತಿಪರ ಜೀವನದ ಮಾದರಿಯ ವಿಘಟನೆ ಮತ್ತು ನವ-ಉದಾರವಾದದ ನಡುವೆ ಸಂಬಂಧವಿದೆ ಎಂದು ನಾವು ನಂಬಿರುವ ಕಾರಣದಿಂದಾಗಿ ನಮಗೆ ಅದರ ಬಗ್ಗೆ ಅಸಮಾಧಾನವಿದೆ. ಇನ್ನೂ ನವ-ಉದಾರವಾದದಿಂದ ಪರಿಣಾಮಕಾರಿತ್ವ, ಉತ್ತರದಾಯಿತ್ವ ಹಾಗೂ ಗುಣಮಟ್ಟದ ಹೆಸರಿನಲ್ಲಿ ಏನೆಲ್ಲವನ್ನು ಮಾಡಲು ನಾವು ಒಪ್ಪಿಕೊಂಡಿದ್ದೇವೆ ಎನ್ನುವುದನ್ನು ನೆನಪು ಮಾಡಿಕೊಂಡಾಗ ಅದು ನಮ್ಮನ್ನು ನಿಬ್ಬೆರಗುಗೊಳಿಸುತ್ತದೆ. ತಮ್ಮ ಚಟುವಟಿಕೆಗಳ ವಿವರಗಳನ್ನಾಗಲೀ ಅಥವಾ ತಮ್ಮ ಪಾಠಗಳ ಬೋಧನೆಯ ವಿಧಾನದ ಬಗ್ಗೆ ವಿವರಣೆಗಳನ್ನು ಆಡಳಿತಾಧಿಕಾರಿಗಳಿಗೆ ಮುಂಚಿತವಾಗಿ ಒದಗಿಸುವುದನ್ನು ಹಳೆಯ ತಲೆಮಾರಿನ ವಿಶ್ವವಿದ್ಯಾಲಯ ಶಿಕ್ಷಕರಾರೂ ಕೇಳಿರಲಾರರು.

ಕೈಗಾರಿಕೆ ಹಾಗೂ ಉದ್ಯಮಗಳಿಗೆ ಮಾತ್ರ ಸರಿಹೊಂದುವ ಗುಣಮಟ್ಟದ ಶಿಷ್ಟಾಚಾರಗಳಂತಹ ಪರಿಭಾಷೆಗಳಲ್ಲಿ ಬೋಧನೆ ಹಾಗೂ ಸಂಶೋಧನೆಯನ್ನು ಅಳೆಯಬಹುದು ಎಂಬ ಕಲ್ಪನೆಗೆ ನಾವು ಈಗಿರುವಂತೆ ಒಗ್ಗಿಕೊಂಡಿಲ್ಲದಿದ್ದರೆ ಅದನ್ನು ಕೇಳಿಸಿಕೊಳ್ಳಲೂ ನಮಗೆ ಮುಜುಗರವಾಗಬಹುದು. ಹಿಂದೆ ಬೋಧನೆಯಲ್ಲಿ, ವಿದ್ಯಾರ್ಥಿಪ್ರೇರಿತ ವಿಷಯಾಂತರ ಹಾಗೂ ಗಂಭೀರ ಚರ್ಚೆಗಳು ಶ್ರೇಷ್ಠತೆಯ ಅಳತೆಗೋಲಾಗಿದ್ದವು. ಆದರೆ ಈ ಹೊಸ ಆಳ್ವಿಕೆಯಲ್ಲಿ ನಿಗದಿಗೊಳಿಸಲಾದ ಪವರ್ ಪಾಯಿಂಟ್ ಪ್ರದರ್ಶನವು ಯಾವುದೇ ಪೂರ್ವನಿಯೋಜಿತವಲ್ಲದ ಮಾತುಕತೆಯನ್ನು ನಿಷೇಧಿಸುತ್ತದೆ. ನವ-ಉದಾರವಾದವು ಹುಟ್ಟಿಸುವ ಮೂರನೆಯ ಭಾವನೆ ಏನೆಂದರೆ, ಅದು ಗೊಂದಲ. ಅಂದರೆ ಬೋಧನೆಯಲ್ಲಿ ಏನಾಗಿದೆ ಹಾಗೂ ಅದಕ್ಕೆ ಕಾರಣಗಳೇನು ಎಂಬುದನ್ನು ಗುರುತಿಸಿ ಗ್ರಹಿಸಿಕೊಳ್ಳುವುದಾಗಿದೆ.

ಯಾವುದೇ ಸಿದ್ಧಾಂತವೂ ವಿಶ್ವವಿದ್ಯಾಲಯಗಳು ಹಾಗೂ ಶಾಲೆಗಳಲ್ಲಿನ ಜೀವನದಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಗ್ರಹಿಸಬಲ್ಲಂತೆ ಹಾಗೂ ತೃಪ್ತಿಕರವಾಗಿ ವಿವರಿಸಬಲ್ಲಂತೆ ಕಾಣುವುದಿಲ್ಲ. ಬೋಧನೆಯ ಈ ಹೊಸ ಆಳ್ವಿಕೆಯಲ್ಲಿ ಫಲಿತಾಂಶಗಳನ್ನು ನಿರೀಕ್ಷಿಸಲು ಹಾಗೂ ಅವುಗಳನ್ನು ಅಳತೆ ಮಾಡಲು ಸಾಧ್ಯವಿರುವುದರಿಂದಾಗಿ, ಪುನಃ ವರ್ತನವಾದವನ್ನು ಎತ್ತಿಹಿಡಿಯುತ್ತಿದ್ದೇವೆ. ಅಂದರೆ ಮನೋವಿಜ್ಞಾನದಲ್ಲಿನ ಅರಿವಿಗೆ ಸಂಬಂಧಿಸಿದ ಕ್ರಾಂತಿ ಮತ್ತು ಬೋಧನಾ ವಿಧಾನಕ್ಕಿದ್ದ ಅದರ ಸೂಚ್ಯಾರ್ಥಗಳನ್ನು ಮರೆತು ನಾವು ಹಿಮ್ಮುಖ ಜಿಗಿತ ಮಾಡಿದ್ದೇವೆ ಎಂದು ಅನಿಸುತ್ತಿದೆ. ಈ ಸೂಚ್ಯಾರ್ಥಗಳಲ್ಲಿ ಕೆಲವು 1960 ರ ಹೊತ್ತಿಗೆ ಮುಂದುವರಿದ ದೇಶಗಳೆನಿಸಿದ ವಿಶ್ವದ ಹಲವು ಭಾಗಗಳಲ್ಲಿ ಶಾಶ್ವತವಾಗಿ ಸಾಂಸ್ಥೀಕರಣಗೊಂಡಿದ್ದವು. ಅಭಿವೃದ್ಧಿ ಹೊಂದುತ್ತಿರುವ ದೇಶಗಳೆನಿಸಿದ ವಿಶ್ವದ ಭಾಗಗಳಲ್ಲಿ ರೂಢಿಯಲ್ಲಿರುವ ವರ್ತನವಾದದ ಅಭ್ಯಾಸಗಳು ಹೆಚ್ಚಿನ ಶೈಕ್ಷಣಿಕ ಸವಾಲುಗಳನ್ನು ಎದುರಿಸಿರಲಿಲ್ಲ ಮತ್ತು ಈಗ ಅವು ಶಾಲಾ ಆಡಳಿತಗಳ ಸಂಪೂರ್ಣ ಬೆಂಬಲವನ್ನು ಹೊಂದಿವೆ. ಪಶ್ಚಿಮದ ಶ್ರೀಮಂತ ರಾಷ್ಟ್ರಗಳಲ್ಲಿ, ವರ್ತನವಾದದ ಮರುಕಳಿಕೆಯು ಅನುಕ್ತ ಒಮ್ಮತವಿರುವುದರ ಮೂಲಕ ಗುರುತಿಸಲ್ಪಡುತ್ತದೆ. ಇಲ್ಲಿ ಪಠ್ಯಕ್ರಮದ ಮಾರುಕಟ್ಟೆ-ಪ್ರೇರಿತ ಪರಿವರ್ತನೆಯನ್ನು ಮರೆಮಾಚಲು, ಬೋಧನಾ ವಿಧಾನದ ತಜ್ಞರು ಶಾಲೆಯ ಪರಿಣಾಮಕಾರಿತ್ವ, ವಿದ್ಯಾರ್ಥಿಗಳ ಸಮಾಲೋಚನೆ ಮುಂತಾದ ವಾಕ್ಚಾತುರ್ಯವನ್ನು ಒದಗಿಸುವ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ.

**ವಿಚಾರಗಳ ಇತಿಹಾಸ**

"ನವ-ಉದಾರವಾದ" ಎಂಬ ಪರಿಭಾಷೆಯು ಚಾಲ್ತಿಗೆ ಬಂದಾಗಿನಿಂದಲೂ, ನಾನು ನನ್ನ ವಿದ್ಯಾರ್ಥಿಗಳಿಗೆ ಹಾಗೆಂದರೇನು? ಮತ್ತು ಅವರಿಗೆ ಬೇಕಾದಾಗ ಅದನ್ನು ಹೇಗೆ ಬಳಸಬೇಕು? ಎಂದು ವಿವರಿಸಲು ತುಂಬಾ ಕಷ್ಟಪಟ್ಟಿದ್ದೇನೆ. ಹಾಗೆಯೇ ಹೆಚ್ಚಿನ ಸಂದರ್ಭಗಳಲ್ಲಿ ನಾನು ವಿಫಲನಾಗಿದ್ದೇನೆ. ಅದನ್ನು ವಿವರಿಸಲು ಒಬ್ಬ ಶಿಕ್ಷಕನು ಎಷ್ಟೇ ಕಷ್ಟಪಟ್ಟರೂ, ನವ-ಉದಾರವಾದ ಕಾಲದಲ್ಲಿ ಹುಟ್ಟಿ ಬೆಳೆದ ವಿದ್ಯಾರ್ಥಿಗಳು ಅದನ್ನು ವಿಶ್ಲೇಷಣಾತ್ಮಕವಾಗಿಯಲ್ಲದೆ ಪರಿಣಾಮಕಾರಿಯಾದ ರೀತಿಯಲ್ಲಿ ಹಾಗೂ ಟೀಕಾತ್ಮಕವಾಗಿ ಹೇಳಲು ಬಳಸಬಹುದಾದ ಯಾವುದೇ ನಿಯಮಗಳಿಗೆ ಬದ್ಧವಾಗಿರದ ಭಾಷಾಶಾಸ್ತ್ರೀಯ ಉಪಕರಣವಾಗಿ ಉಪಯೋಗಿಸಲು ಮುಂದಾಗುತ್ತಾರೆ. ಪಶ್ಚಿಮದ ಉದಾರವಾದಿ-ಪ್ರಜಾಸತ್ತಾತ್ಮಕ ಚಿಂತನೆಯ ಹಾಗೂ ಬ್ರಿಟಿಷ್ ವಸಾಹತುಶಾಹಿ ಆಡಳಿತದಿಂದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದ ಕಾಲದಲ್ಲಿ ಭಾರತದಲ್ಲಿ ಹೊರಹೊಮ್ಮಿದ ಅದರ ಮೊಳಕೆಗಳ ಐತಿಹಾಸಿಕ ಹಿನ್ನೆಲೆಯಲ್ಲಿ ಪ್ರಗತಿಪರ ಬೋಧನಶಾಸ್ತ್ರೀಯ ಸಿದ್ಧಾಂತವನ್ನು ಅಧ್ಯಯನ ಮಾಡುವಂತಹ ತಾಳ್ಮೆಯನ್ನು ತೋರಿಸುವ ವಿದ್ಯಾರ್ಥಿಗಳು ಬಹಳ ವಿರಳ. ವಿಚಾರಗಳ ಮೂಲವನ್ನು (genealogy) ಅನ್ವೇಷಿಸುವುದಕ್ಕೆ ಹಾಗೂ ಒಂದು ಐತಿಹಾಸಿಕ ಹಿನ್ನೆಲೆಯಲ್ಲಿ ಒಂದು ಪರಿಭಾಷೆಯನ್ನು ನೆಲೆಗೊಳಿಸುವುದಕ್ಕೆ ಬೇಕಾದ ಸಮಯವು ಹೆಚ್ಚಿನ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಲಭ್ಯವಿಲ್ಲ. ಇನ್ನೂ ವಿಷಾದನೀಯ ಸಂಗತಿ ಏನೆಂದರೆ, ವಿಚಾರಗಳ ಇತಿಹಾಸದ ಕುರಿತಾಗಿ ಮಾಡುವ ಇಂತಹ ಹುಡುಕಾಟವು ಶಿಕ್ಷಣದ ಬಗ್ಗೆ ಮಾಡುವ ಅಧ್ಯಯನಕ್ಕೆ ಸಂಬಂಧಿಸಿದೆಯೆಂದು ಭಾವಿಸುವುದಿಲ್ಲ. ಸಿದ್ಧಾಂತ ಹಾಗೂ ಅದರ ವಿಕಾಸದ ಕುರಿತಾಗಿ ಬೋಧನಶಾಸ್ತ್ರೀಯವಾದ ಹುಡುಕಾಟ ಮಾಡಲೂ ನಮಗೆ ಅವಕಾಶವಿಲ್ಲ. ಶಿಕ್ಷಣ ಹಾಗೂ ಶಿಕ್ಷಕ ತರಬೇತಿ ವಿಭಾಗಗಳಲ್ಲಿ, ಐತಿಹಾಸಿಕ ಹಾಗೂ ತತ್ತ್ವಶಾಸ್ತ್ರೀಯ ಹಿನ್ನೆಲೆಯಲ್ಲಿ ಬೋಧನಶಾಸ್ತ್ರೀಯ ಆಧುನಿಕತಾವಾದವನ್ನು ನೆಲೆಗೊಳಿಸಲು ಅವಶ್ಯಕವಾದ ಪಠ್ಯಪೂರಕ ಸ್ಥಳಾವಕಾಶವೂ ಸಹ ಬಹಳಷ್ಟು ಕಡಮೆಯಾಗಿದೆ. ಉದಾರವಾದಿಯಾಗಿರುವುದೆಂದರೆ ಹೊಂದಿಕೊಳ್ಳುವ ಮನೋಭಾವವಿರುವುದೆಂದಲ್ಲವೇ? ಎಂಬ ತರ್ಕದ ಪ್ರಕಾರ ನಾವು ಉತ್ತಮ ಉದಾರವಾದಿಗಳಾಗಿ ಇಂತಹ ಸ್ಥಳಾವಕಾಶವನ್ನು ಅನುದ್ದಿಷ್ಟವಾಗಿ ಬಿಟ್ಟುಕೊಟ್ಟುಬಿಟ್ಟಿದ್ದೇವೆಯೇ? ಎಂದು ನಾವು ಆಲೋಚಿಸಬೇಕಾಗಿದೆ.

ಉದಾರವಾದಿ ಚಿಂತನೆಯು 19ನೇ ಶತಮಾನದಲ್ಲಿ ಶಿಕ್ಷಣಕ್ಕೆ ಪ್ರಯೋಜಕತಾವಾದವನ್ನು ಅಳವಡಿಸಿದಾಗ, ಶಿಕ್ಷಣದ ಅನುಸರಣೆ ಹಾಗೂ ಅಭ್ಯಾಸಗಳಿಗೆ ಒಂದು ಆಂತರಿಕ ಔಚಿತ್ಯವನ್ನು ನೀಡಿ ಪ್ರಮುಖ ಪ್ರಗತಿಯನ್ನು ಸಾಧಿಸಿತು. ಆ ಪ್ರಯೋಜಕತಾವಾದಿ ತತ್ತ್ವಗಳು ಪ್ರಜಾಸತ್ತಾತ್ಮಕ ಮೌಲ್ಯಗಳಿಂದ ದೂರವಾಗಿಯೂ, ಅವುಗಳ ಬಗ್ಗೆ ಅವಹೇಳನಕಾರಿಯಾಗಿಯೂ ಇದ್ದವು. ಮತ್ತು ಅದೇ ಕಾರಣಕ್ಕೆ ಅವು ಆಸ್ತಿವರ್ಗದ ಹಿತಾಸಕ್ತಿಯ ರಕ್ಷಕ ಎಂಬುದಕ್ಕಿಂತ ಹೆಚ್ಚಿನ ಯಾವುದೇ ಪಾತ್ರವನ್ನು ಪ್ರಭುತ್ವಕ್ಕೆ ನೀಡಲಿಲ್ಲ. ಈ ತತ್ತ್ವಗಳು ಸ್ಥಳೀಯ

ಸ್ವಾರ್ಥಸಾಧಕ ಶ್ರೀಮಂತರ ಜೊತೆಗಿನ ಹೊಂದಾಣಿಕೆಯಲ್ಲಿ ವಸಾಹತುಶಾಹಿ ಆಡಳಿತಕ್ಕೆ ನೈತಿಕ ಸಹಮತತೆಯನ್ನು ನೀಡಿದವು ((Kumar) 1991-2005). ಮಕ್ಕಳನ್ನು ಬಡತನದಿಂದ ಕಾಪಾಡಿ ಅವರಿಗೆ ಶಿಕ್ಷಣ ನೀಡುವುದು ಪ್ರಭುತ್ವದ ಹೊಸ ಪಾತ್ರ ಎಂದು 19ನೇ ಶತಮಾನದಲ್ಲಿ ಪ್ರಯೋಜಕತಾವಾದ ಚಿಂತನೆಯಲ್ಲಿ ಉಂಟಾದ ಪರಿವರ್ತನೆಯು ಗುರುತಿಸಿತು. ಶಿಕ್ಷಣವು ವ್ಯಕ್ತಿಗೆ ಉಪಯುಕ್ತ ವಸ್ತುಗಳಿಂದ ಹೆಚ್ಚಿನ ಸಂತೋಷವನ್ನು ಪಡೆಯುವ ಸಾಮರ್ಥ್ಯವನ್ನು ನೀಡುವುದು ಮಾತ್ರವಲ್ಲದೆ ಸೃಜನಾತ್ಮಕವಾದ ಹಾಗೂ ಚಿಂತನಾತ್ಮಕವಾದ ಸಾಮರ್ಥ್ಯವನ್ನು ನೀಡುವ ಉದ್ದೇಶವನ್ನು ಸಹ ಹೊಂದಿದೆ ಎಂಬ ವಿಚಾರದಿಂದ ಈ ಹೊಸ ಪಾತ್ರವು ತನಗೆ ಬೇಕಾದ ಸಮರ್ಥನೆಯನ್ನು ಪಡೆಯಿತು (Macpherson(ಮೆಕ್ಫೆರ್ಸನ್)1974). ನವ-ಉದಾರವಾದಿ ಪ್ರಭುತ್ವವಾದರೋ ಗುಣಮಟ್ಟ ಹಾಗೂ ಪರಿಣಾಮಕಾರಿತ್ವ ವಾದವನ್ನು ಬಳಸಿ ಈ ಉದಾರ ಪ್ರಜಾಸತ್ತಾತ್ಮಕ ಚಿಂತನೆಯ ಉದ್ದೇಶದ ಸತ್ವಗುಂದಿಸಿತು.

"ಮಾರುಕಟ್ಟೆಯ ಸಂಸ್ಥೆಗಳ ಅವಕಾಶದ ವ್ಯಾಪ್ತಿಯನ್ನು ರಾಜಕೀಯ ಸಾಧ್ಯತೆಯ ಸೀಮೆಗಳಿಗೆ ವಿಸ್ತರಿಸುವ" (Gray(ಗ್ರೇ)2009:165) ನವ-ಉದಾರವಾದಿ ಯೋಜನೆಯು ಸಹಜವಾಗಿ ಅನುಭೋಗಕ್ಕೆ ಒತ್ತು ಕೊಡುತ್ತದೆ; ಆದ್ದರಿಂದಲೇ ಶಿಕ್ಷಣವು ಒಂದು ಉಪಭೋಗ ವಸ್ತು ಹಾಗೂ ಅನುಭವ ಎಂದು ಕಾಣಬೇಕೆಂದು ಅದು ಬಯಸುತ್ತದೆ. ವ್ಯಕ್ತಿಯ ಕರ್ತೃತ್ವವನ್ನು ವರ್ಧಿಸಲು ಶಿಕ್ಷಣವನ್ನು ಸಮರ್ಥವಾಗಿಸಿದ ಇತರ ಸಂಪನ್ಮೂಲಗಳೂ ಸಹ ಉಪಭೋಗ ವಸ್ತುಗಳಂತೆ ಆಗುವುದನ್ನು ಅದು ಖಾತರಿಪಡಿಸುತ್ತದೆ. ಆರೋಗ್ಯ ಹಾಗೂ ಸಂಸ್ಕೃತಿಗಳೂ ಇದೇ ಪ್ರವರ್ಗಕ್ಕೆ ಸೇರುತ್ತವೆ. ಶಿಕ್ಷಕರು ಮಕ್ಕಳೊಂದಿಗೆ ಕೆಲಸ ಮಾಡುವಾಗ ತಮ್ಮ ವೃತ್ತಿಗೆ ಸಂಬಂಧಿಸಿದ ಆಶೋತ್ತರಗಳನ್ನು ನನಸು ಮಾಡಿಕೊಳ್ಳಲು ಸಹಾಯ ಮಾಡುವ ಸಂಪನ್ಮೂಲಗಳು ಹಾಗೂ ಪರಿಸ್ಥಿತಿಗಳ ಮೇಲೆ ಈ ಉದ್ಯಮದ ಮಾದರಿಯನ್ನು ಅನ್ವಯಿಸುವುದರಿಂದಾಗುವ ವಿನಾಶಕಾರೀ ಪರಿಣಾಮಗಳನ್ನು ಗುರುತಿಸಲು ಇವೆರಡೂ ಉದಾಹರಣೆಗಳಾಗಿವೆ. ಈ ಎರಡೂ ವಲಯಗಳು ಕಿರಿಯರೊಂದಿಗಿನ ಶಿಕ್ಷಕರ ಕೆಲಸವನ್ನು ಪ್ರತಿಬಂಧಿಸುತ್ತವೆ. ಇನ್ನಿತರ ಬೆಳವಣಿಗೆಗಳೊಂದಿಗೆ, ಮಾಧ್ಯಮಗಳ ಮೂಲಕ ಆರೋಗ್ಯಸೇವೆಗಳ ವಾಣಿಜ್ಯಕರಣ ಹಾಗೂ ಸಂಸ್ಕೃತಿಯನ್ನು ವ್ಯಾಪಾರೀಕರಣವಾಗಿಸಿದ್ದು, ಮನೆಯ ವಾತಾವರಣದಲ್ಲಿ ತೀರಾ ಹೊಸತಾದ ಪರಿಸ್ಥಿತಿಯನ್ನು ಉಂಟುಮಾಡಿತು. ಹೆಲ್ಪರಿನ್ (Helperin) ಹಾಗೂ ರ್‍ಯಾಟರಿ (Ratteree) (2003:135) ಅವರು ಹೇಳುವಂತೆ, "ತರಗತಿಯ ಅಧ್ಯಾಪಕರು ತಮ್ಮನ್ನು ಅಧ್ಯಾಪಕವೃತ್ತಿಗೆ ಸೆಳೆದಿದ್ದ ಶೈಕ್ಷಣಿಕ ಸವಾಲುಗಳಿಂದ ಗುಣಲಕ್ಷಣಗಳಲ್ಲಿ ಭಿನ್ನವಾದ ಭಯಂಕರ ಸಾಮಾಜಿಕ ಸಮಸ್ಯೆಗಳೊಂದಿಗೆ ಹೆಚ್ಚು ಹೆಚ್ಚು ಹೆಣಗಬೇಕಾಗಿದೆ."

## ನವ-ಉದಾರವಾದಿ ಆಳ್ವಿಕೆಯ ಅಡಿಯಲ್ಲಿ ಬೋಧನೆ

ಶಿಕ್ಷಣ ಸಂಸ್ಥೆಗಳನ್ನು ಮಾರುಕಟ್ಟೆಯ ತತ್ತ್ವಗಳ ಆಧಾರದ ಮೇಲೆ ನಡೆಸಬಹುದೆಂಬ ಕಲ್ಪನೆಯು ಜನಪ್ರಿಯವಾಗಿಯೂ, ಸಹಜವಾಗಿಯೂ ಆಗಿಬಿಟ್ಟಿದೆ. ಲಾಭಕೋರತನವು ಅಂತಹ ಸಂಸ್ಥೆಗಳ ನ್ಯಾಯಬದ್ಧ ಉದ್ದೇಶ ಎಂದು ಒಪ್ಪಿಕೊಳ್ಳುವುದರೊಂದಿಗೆ, ಶೈಕ್ಷಣಿಕ ಸೇವೆಗಳ ಖಾಸಗೀಕರಣವು ವಿಸ್ತರಿಸಿಕೊಂಡಿದೆ. ಕಾರ್ಯನೀತಿ ರೂಪಿಸುವವರು ಹಾಗೂ (ಈಗ ಆಡಳಿತಾಧಿಕಾರಿಗಳು ಎಂದು ಕರೆಯಲ್ಪಡುವ) ಸಂಸ್ಥೆಯ ಮುಖಂಡರುಗಳ ವಲಯದಲ್ಲಿ ಮಾತ್ರವಲ್ಲದೆ ಶಿಕ್ಷಕ-ಶಿಕ್ಷಣ ನೀಡುವವರು ಹಾಗೂ ಶಿಕ್ಷಣತಜ್ಞರ ನಡುವೆಯೂ ಸಹ ಲಾಭದಾಯಕತೆ ಮಾತ್ರವಲ್ಲದೆ, ಪರಿಣಾಮಕಾರಿತ್ವ, ಉತ್ತರದಾಯಿತ್ವ ಹಾಗೂ ಗುಣಮಟ್ಟಗಳು ವ್ಯಾಪಕವಾಗಿ ಅಂಗೀಕಾರವನ್ನು ಪಡೆದಿವೆ. ವ್ಯಯ-ಪರಿಣಾಮಕಾರಿತ್ವದೊಂದಿಗೆ ಗುಣಮಟ್ಟದ ಕುರಿತ ಈ ಹೊಸ ವಾಗ್ವ್ಯವಹಾರವು ಶಿಕ್ಷಕರನ್ನೇ ಗುರಿಯಾಗಿಸಿಕೊಂಡಿದೆ ಎಂದು ಅರ್ಥಮಾಡಿಕೊಳ್ಳಲು ಹೆಚ್ಚಿನ ಸಮಯವಾಗಲೀ ಅಥವಾ ಕಲ್ಪನಾಶಕ್ತಿಯಾಗಲೀ ಬೇಕಿಲ್ಲ. ಸಂಸ್ಥೆಯ ಆಡಳಿತವನ್ನು ಸಾಂಸ್ಥಿಕೀಕರಣಗೊಳಿಸುವುದೆಂದರೆ ಶಿಕ್ಷಕರನ್ನು ಪೂರ್ವನಿಗದಿತ ಗುಣಮಟ್ಟದ ಮಾನದಂಡಗಳನ್ನು ಪೂರೈಸಲು ವಾಡಿಕೆಯಾಗಿ ಹೊಸ ಮಾಹಿತಿ ತಂತ್ರಜ್ಞಾನವನ್ನು ಬಳಸುವ ಸೇವಾ ಪೂರೈಕೆದಾರ(service providers)ರನ್ನಾಗಿ ಪರಿಗಣಿಸುವುದು ಮತ್ತು ವೆಚ್ಚ ಕಡಿತವನ್ನು (cost-cutting) ಸಂಯೋಜಿತವಾಗಿ ಮತ್ತು ಜಾಣ್ಮೆಯಿಂದ ಮಾಡುವುದರ ಮೂಲಕ ಶಿಕ್ಷಕರು ಅವರು ಸ್ವತಃ ಉಪಸ್ಥಿತರಾಗಿ ವಹಿಸುವ ಪಾತ್ರ ಹಾಗೂ ನೀಡುವ ಕೊಡುಗೆಗಳನ್ನು ಮಿತಿಗೊಳಿಸುವುದು ಎಂದರ್ಥ. ಈ ಫಲಿತಾಂಶ ಆಧಾರಿತ ಸಾಂಸ್ಥಿಕ ಸಂಸ್ಕೃತಿಯ ಅತಿ ಹೆಚ್ಚಿನ ಭಾರವು ಶಿಕ್ಷಕರ ಮೇಲೆ ಬಿದ್ದಿದೆ. ಓರ್ವ ಶಿಕ್ಷಕರ ವೃತ್ತೀಯ ಯೋಗ್ಯತೆಯನ್ನು ಅವನ ಅಥವಾ ಅವಳ ಪರಿಶ್ರಮದ ನಿರೀಕ್ಷಿತ ಫಲಿತಾಂಶಗಳು (predictability) ಹಾಗೂ ಪರಿಮೇಯತೆಯ (measurability) ಪರಿಭಾಷೆಯಲ್ಲಿ ಸಾಮಾನ್ಯವಾಗಿ ಚರ್ಚಿಸಲಾಗುತ್ತಿದೆ. ಹಲವು ರಾಷ್ಟ್ರಗಳಲ್ಲಿ ಶಿಕ್ಷಕರ ದೈನಂದಿನ ಬದುಕಿನ ಮೇಲೆಯೇ ಒಂದು ಹೊಸ ಆಳ್ವಿಕೆಯನ್ನು ಹೇರಲಾಗಿದೆ. ಶಿಕ್ಷಕರು ತಮ್ಮ ಸಮಯದ ಬಹುಭಾಗವನ್ನು ತಮ್ಮದೇ ಆದ ಚಟುವಟಿಕೆಗಳನ್ನು ಅಧಿಕೃತವಾಗಿ ಯೋಜಿಸುವುದು, ವಿವರಿಸುವುದು, ಸಮರ್ಥಿಸುವುದು ಹಾಗೂ ಮೌಲ್ಯಮಾಪನ ಮಾಡುವುದರಲ್ಲೇ ಕಳೆಯಬೇಕಾಗಿದೆ. ಈ ಚಟುವಟಿಕೆಗಳ ದಾಖಲೆಯನ್ನು ಒಳಗೊಂಡ ದಾಖಲಾತಿಯನ್ನು ಆಡಳಿತವು ಶಿಕ್ಷಕರ ಗುಣಮಟ್ಟ ಹಾಗೂ ಪರಿಣಾಮಕಾರಿತ್ವವನ್ನು ಅಳೆಯಲು ಬಳಸುತ್ತದೆ.

ಶಿಕ್ಷಕರು ಮಕ್ಕಳೊಂದಿಗೆ ಕಳೆಯಬಹುದಾದ ಅವಧಿಯಲ್ಲಿ ಗಣನೀಯವಾದ ಕೊರತೆಯಾಗಿರುವುದು ಈ ಆಳ್ವಿಕೆಯ ಒಂದು ಪರಿಣಾಮ. ಹಿಂದೆ ಶಿಕ್ಷಣ ವ್ಯವಸ್ಥೆಯಿಂದ ಹೊರಗಿದ್ದ ಒಂದು ಇಡೀ ಸಾಮಾಜಿಕ-ಆರ್ಥಿಕ ವರ್ಗವು ಈಗ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗಿರುವ ಭಾರತದಂತಹ ದೇಶಗಳಲ್ಲಿ, ಶಿಕ್ಷಕರ ಕೆಲಸ ಹಾಗೂ ದಿನಚರಿಯನ್ನು

ಅಧಿಕಾರಶಾಹಿಗೊಳಿಸಿರುವುದು ಅವರು ಮಕ್ಕಳೊಂದಿಗೆ ನೇರವಾಗಿ ಕಳೆಯಬಹುದಾದ ಸಮಯದ ಮೇಲೆ ಒಂದು ತೀವ್ರವಾದ ಪ್ರತಿಬಂಧವನ್ನು ಹೇರಿದೆ. ತಮ್ಮ ಕುಟುಂಬಗಳಲ್ಲಿ ಶಾಲೆಗೆ ಹೋಗುವವರಲ್ಲಿ, ಮೊದಲ ತಲೆಮಾರಿನವರಾದ ಮಕ್ಕಳು ಶಿಕ್ಷಕರೊಂದಿಗೆ ಹೆಚ್ಚಿನ ಸಮಯದ ಅವಶ್ಯಕತೆಯಿದೆಯೇ ಹೊರತು ಕಡಿಮೆ ಸಮಯವಲ್ಲ. ಶಿಕ್ಷಕರ ಸ್ವಂತ ಸಾಮಾಜಿಕ ಹಿನ್ನೆಲೆಯೇ ವೈವಿಧ್ಯೀಕರಣಗೊಳ್ಳುತ್ತಿರುವುದರಿಂದ ಈ ಸಮಸ್ಯೆಯು ಇನ್ನಷ್ಟು ಜಟಿಲಗೊಳ್ಳುತ್ತಿದೆ. ಒಬ್ಬ ಹೊಸ ಶಿಕ್ಷಕಿಗೆ ಕುಟುಂಬದಲ್ಲಿನ ತನ್ನ ಪಾತ್ರಕ್ಕೆ ವ್ಯತಿರಿಕ್ತವಾಗಿ ತರಗತಿ ಕೊಠಡಿಯಲ್ಲಿ ತನ್ನ ವೃತ್ತಿಗೆ ತಕ್ಕ ಪಾತ್ರವನ್ನು ನಿಭಾಯಿಸಲು ತನ್ನ ಜಾತಿ, ವರ್ಗ, ಲಿಂಗ ಮುಂತಾದ ಅಸ್ಮಿತೆಗಳನ್ನು ದಾಟಿಹೋಗಲು ಹಾಗೂ ಹೊಂದಾಣಿಕೆ ಮಾಡಿಕೊಳ್ಳಲು ಅಗತ್ಯವಾದ ಹಾಗೂ ನಿರಂತರವಾದ ತರಬೇತಿ ಮತ್ತು ಸಂಸ್ಥೆಯೊಳಗೆ ಸ್ಥಳಾವಕಾಶಗಳು ಬೇಕಾಗುತ್ತವೆ. ಹೊಸ ಆಡಳಿತ ವ್ಯವಸ್ಥೆ ಹೊಂದಿರುವ ಶಾಲೆಗಳು ಅವಳಿಗೆ ತನ್ನ ಅನೇಕ ಪಾತ್ರಗಳು ಹಾಗೂ ಅಸ್ಮಿತೆಗಳನ್ನು ದಾಟಿಹೋಗಲು ಹೆಚ್ಚಿನ ಅವಕಾಶವನ್ನು ಒದಗಿಸುವುದಿಲ್ಲ. ವಾಸ್ತವವಾಗಿ, ಶಾಲೆಯ ವ್ಯವಸ್ಥಾಪಕರು ಹಾಗೂ ಅಧಿಕಾರಶಾಹಿಗಳು ಶಿಕ್ಷಕಿಯನ್ನು ಮನುಷ್ಯಳನ್ನಾಗಿ ಪರಿಗಣಿಸಬೇಕು ಎನ್ನುವ ಕಾಳಜಿಯನ್ನೇ ಹೊಂದಿರುವುದಿಲ್ಲ; ಅವಳನ್ನು ಸೇವಾ ಪೂರೈಕೆದಾರಳನ್ನಾಗಿ ಕಾಣುತ್ತಾರೆ ಮತ್ತು ಕೇವಲ ಅವಳ ಉತ್ಪಾದನಾ ಸಾಮರ್ಥ್ಯದಲ್ಲಿ ಆಸಕ್ತಿ ಹೊಂದಿರುತ್ತಾರೆ. ಸಂಪನ್ಮೂಲದ ಕೊರತೆ ಇರುವ ಸರ್ಕಾರಿ ಶಾಲೆಗಳಾಗಲೀ, ಅಥವಾ ವಿವಿಧ ರೀತಿಯ ಖಾಸಗಿ ಶಾಲೆಗಳಾಗಲೀ ಶಿಕ್ಷಕಿಯ ಬಗ್ಗೆ ಯಾವುದೇ ಅನುಕಂಪ ಹೊಂದಿರುವುದಿಲ್ಲ.

## ಕಾರ್ಯಕ್ರಮಗಳ ಹೊರಗುತ್ತಿಗೆ

ದಕ್ಷಿಣ ಏಷ್ಯಾದ ಅನೇಕ ಭಾಗಗಳಲ್ಲಿ, ಗುಣಮಟ್ಟ ಸುಧಾರಣೆಯ ಕಾರ್ಯಕ್ರಮಗಳನ್ನು, ತಮಗೆ ದತ್ತಿ ನೀಡಿದವರ ಪರವಾಗಿ ಶಿಕ್ಷಕರ ಕೆಲಸವನ್ನು ಉಸ್ತುವಾರಿ ಮಾಡುವ, ಬಹುರಾಷ್ಟ್ರೀಯ ಸರ್ಕಾರೇತರ ಸಂಘಟನೆಗಳಿಗೆ (NGOs) ಅಥವಾ ಅವುಗಳ ಸ್ಥಳೀಯ ಅಂಗಸಂಸ್ಥೆಗಳಿಗೆ ಹೊರಗುತ್ತಿಗೆ ನೀಡಲಾಗುತ್ತದೆ. ಆನಂತರ ದತ್ತಿ ನೀಡಿದವರು ಶಿಕ್ಷಕರ ಪರಿಶ್ರಮ ಹಾಗೂ ಅದರ ಫಲಿತಾಂಶಗಳ ಬಗ್ಗೆ ನಿಖರವಾಗಿ ಸ್ಪಷ್ಟಪಡಿಸಿದ ವಿವರಗಳನ್ನು ಕೇಳುತ್ತಾರೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಶಿಕ್ಷಣದಲ್ಲಿನ ನವ-ಉದಾರವಾದಿ ಆಡಳಿತದಲ್ಲಿ ಸರ್ಕಾರೇತರ ಸಂಘಟನೆಗಳು ಒಂದು ಮುಖ್ಯ ಭಾಗವಾಗಿವೆ. ಸ್ಥಳೀಯ ಪ್ರಭುತ್ವದ ಕಾರ್ಯಭಾರಗಳೊಂದಿಗೆ ಕೈಜೋಡಿಸಿ ಸರ್ಕಾರೇತರ ಸಂಘಟನೆಗಳು ಪ್ರೋತ್ಸಾಹಿಸುವ ಕೆಲಸದ ಈ ಹೊಸ ಸಂಸ್ಕೃತಿಯು ಸಂಪನ್ಮೂಲ ವ್ಯಕ್ತಿಗಳಾಗಿ ಸೇವೆ ನೀಡುವ ಪ್ಯಾರಾ-ಅಕಡೆಮಿಕ್ಸ್ (para-academics)ಗಳಿಂದ ಪದೇ ಪದೇ ನೀಡಲಾಗುವ ಸೇವಾವಧಿ-ಮಧ್ಯದ ತರಬೇತಿಗಳನ್ನು ಒಳಗೊಳ್ಳುತ್ತದೆ. ಆ ವ್ಯಕ್ತಿಗಳಿಗೆ ತರಗತಿ ಕೊಠಡಿಯ ಅನುಭವವಾಗಲೀ ಶಿಕ್ಷಣದ ಸೈದ್ಧಾಂತಿಕ ಜ್ಞಾನವಾಗಲೀ ಇರದಿದ್ದರೂ

ಶಿಕ್ಷಕರಿಗಿಂತ ಹೆಚ್ಚಿನ ಸ್ಥಾನಮಾನವನ್ನು ಹೊಂದಿರುತ್ತಾರೆ. ಒತ್ತಾಯಪೂರ್ವಕವಾಗಿ ಹಾಜರಾಗಬೇಕಾದ ಇಂತಹ ತರಬೇತಿ ಕಾರ್ಯಕ್ರಮಗಳಿಗೆ ಶಿಕ್ಷಕರ ಪ್ರತಿಕ್ರಿಯೆಯು ಸಿನಿಕತನ ಹಾಗೂ ಹತಾಶೆ ಆಗಿರುತ್ತದೆ.

ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿನ ಶಿಕ್ಷಕರ ಕಾರ್ಯ ಹಾಗೂ ಅಸ್ಮಿತೆಗಳಲ್ಲಿ ನವ-ಉದಾರವಾದಿ ನೀತಿಗಳ ಆಳ್ವಿಕೆಯ ಅಡಿಯಲ್ಲಿ ಬೆಂಬಲಿಸಲಾದ ನೇಮಕಾತಿ ಹಾಗೂ ತರಬೇತಿ ನೀತಿಗಳಿಂದಾಗಿ ಉಂಟಾದ ತುಚ್ಚೀಕರಣದ ಕಡೆಗೆ ಬೆರಳು ತೋರಿಸುವ ಮೂಲಕ ಶಾಲಾ ವಾತಾವರಣದ ಕುರಿತ ಈ ಸ್ವಯಮನ್ವೇಷಣೆಯ (heuristic) ಚಿತ್ರಣವನ್ನು ಪೂರ್ಣಗೊಳಿಸಬಹುದು. “ಸಾಧಾರಣ ಬೋಧನೆ” ಹಾಗೂ “ಯಾರು ಬೇಕಾದರೂ ಬೋಧಿಸಬಹುದು” ಎಂಬಂತಹ ಕಲ್ಪನೆಗಳು ಸೇವಾ-ಪೂರ್ವ ತರಬೇತಿಯ ಪಾವಿತ್ರ್ಯವನ್ನು ಹಾಗೂ ಅದನ್ನು ಸುಧಾರಿಸುವ ಅವಶ್ಯಕತೆಯನ್ನು ಕಡೆಗಣಿಸಿಬಿಟ್ಟಿವೆ. ತರಬೇತಿಯಿಲ್ಲದ ಶಿಕ್ಷಕರನ್ನು ನೇಮಿಸಿಕೊಳ್ಳುವುದು, ಶೈಕ್ಷಣಿಕ ತರಬೇತಿ ಕಾರ್ಯಕ್ರಮಗಳ ಬದಲಿಗೆ ಯಾವುದೇ ಸೈದ್ಧಾಂತಿಕ ತಿರುಳಿಲ್ಲದ ಅಲ್ಪಾವಧಿ ಕಾರ್ಯಕ್ರಮಗಳನ್ನು ನಡೆಸುವುದು, ಮತ್ತು ತರಬೇತಿಯ ಏಕಮಾರ್ಗವಾಗಿ ದೂರಶಿಕ್ಷಣವನ್ನು ಬಳಸುವುದು ಮುಂತಾದವುಗಳನ್ನು ಶಿಕ್ಷಕರ ಕೊರತೆಯನ್ನು ನೀಗಿಸುವ ಉಪಾಯಗಳನ್ನಾಗಿ ಬೆಂಬಲಿಸಲಾಗುತ್ತಿದೆ. ಶಿಕ್ಷಕಿಯು ಮತ್ತಷ್ಟು ತರಬೇತಿಗಳ ಮೂಲಕ ನಿರಂತರವಾಗಿ ಅಭಿವೃದ್ಧಿಪಡಿಸಬೇಕಾದ ಸಂಪನ್ಮೂಲ ಎಂದು ಪರಿಗಣಿಸಲಾಗುತ್ತಾಳೆ ಹೊರತು ಅನುಭವದ ಮೂಲಕ ಕಲಿಯಲು ತನ್ನದೇ ಆದ ಕರ್ತೃತ್ವ ಮತ್ತು ಸಾಮರ್ಥ್ಯ ಹೊಂದಿರುವ ವ್ಯಕ್ತಿಯಾಗಿ ಅಲ್ಲ. ಶಿಕ್ಷಕಿಯ ಪಾತ್ರದಲ್ಲಿನ ಪರಿವರ್ತನೆ, ಅವಳ ವೃತ್ತಿಸಂಬಂಧದ ಸ್ಥಾನಮಾನ ಹಾಗೂ ಸ್ವಾಯತ್ತತೆಗಳು ನವ-ಉದಾರವಾದಿ ದೃಷ್ಟಿಕೋನದ ಪ್ರಧಾನ ಯಶಸ್ಸುಗಳೆಂದು ವರ್ಣಿಸಬಹುದು. ಬೋಧನೆಯು ಅದನ್ನು ನಡೆಸುವವರಿಗೆ ಬರೀ ಘನತೆ ಹಾಗೂ ಸ್ವಾಯತ್ತತೆ ಮಾತ್ರವಲ್ಲ, ವೃತ್ತಿನಿರತರ ಒಂದು ಸಮುದಾಯವಾಗಿ ಕಾರ್ಯ ನಿರ್ವಹಿಸಲು ಬೇಕಾದ ಆತ್ಮವಿಶ್ವಾಸವನ್ನು ತಂದು ಕೊಡುವಂತಹ ಒಂದು ಆಧುನಿಕ ವೃತ್ತಿ ಎಂಬುದಾಗಿ ಸ್ಥಾಪಿಸಲು ನಡೆಸಿದ ಉದಾರವಾದಿ-ಪ್ರಜಾಸತ್ತಾತ್ಮಕ ಹೋರಾಟದ ಗಮನಾರ್ಹ ಹಿಮ್ಮುಖ ಎಂದು ಸಹ ನವ-ಉದಾರವಾದವನ್ನು ವರ್ಣಿಸಬಹುದು. ನವ-ಉದಾರವಾದಿ ಪ್ರಭುತ್ವದ ನೀತಿ ಹಾಗೂ ಆಳ್ವಿಕೆಗಳ ಅಡಿಯಲ್ಲಿ ಕಳೆದ ಸುಮಾರು ಕಾಲು ಶತಮಾನದಷ್ಟು ಅವಧಿಯಲ್ಲಿ ಬೋಧನೆಯು ಅನುಭವಿಸಿರುವ ನಷ್ಟ ಹಾಗೂ ಒಂದು ವೃತ್ತಿಯಾಗಿ ಅದರ ಅಸ್ಮಿತೆಯಲ್ಲಿ ಆದ ಬದಲಾವಣೆಗಳನ್ನು ಅಳೆಯಲು ಈ ಪದಗಳು ಸಹಾಯ ಮಾಡಬಹುದು. ಒಂದು ಸಾಪೇಕ್ಷರಿೀಯ ಚಟುವಟಿಕೆಯಾಗಿ, ಬೋಧನೆಯನ್ನು ಮಗುವಿಗೆ ಕರ್ತೃತ್ವ ನೀಡುವ ಹಾಗೂ ಫಲಿತಾಂಶಗಳು ಗಣನೀಯವಾಗಿ ಅನಿರ್ದಿಷ್ಟವಾಗಿರಬಹುದು ಎನ್ನುವುದನ್ನು ಸ್ವೀಕರಿಸುವ ಚಟುವಟಿಕೆ ಎಂದು ಅರ್ಥೈಸಬಹುದು. ಸ್ಟೆನ್‌ಹೌಸ್ (Stenhouse)

ಅವರು (1980ರಲ್ಲಿ) ಹೇಳಿದಂತೆ, ನಿರೀಕ್ಷಿತ ಫಲಿತಾಂಶಗಳನ್ನು ಸೂಚಿಸಲು ಸಾಧ್ಯವಾಗದಿರುವುದೇ ಶಿಕ್ಷಣದ ಅತ್ಯಂತ ಅಮೂಲ್ಯ ಫಲಿತಾಂಶಗಳು. ಒಂದು ಪೂರ್ವ-ಯೋಜಿತ ಫಲಿತಾಂಶಗಳಿಗಾಗಿ ಬರೆದಿಡಲಾದ ಪಠ್ಯಕ್ರಮದೊಂದಿಗೆ ಕೆಲಸ ಮಾಡಲು ಶಿಕ್ಷಕರನ್ನು ಬಲವಂತ ಮಾಡುವ ನವ-ಉದಾರವಾದಿ ಮೂಲತತ್ತ್ವದಲ್ಲಿ ಶಿಕ್ಷಣದ ಮಾನವೀಯ ಗುರಿಗಳು ಹಾಗೂ ಬೋಧನೆಯ ಸಾಪೇಕ್ಷತೆಯ ಲಕ್ಷಣಗಳೊಂದಿಗೆ ಪ್ರತಿಧ್ವನಿಸುವ ಇಂತಹ ದೃಷ್ಟಿಕೋನಗಳಿಗೆ ಯಾವುದೇ ಅವಕಾಶವಿಲ್ಲ. ಪರಿಣಾಮಕಾರಿತ್ವವನ್ನು ಗರಿಷ್ಠಗೊಳಿಸುವ ಹೆಸರಿನಲ್ಲಿ ಅದು ಸಂಸ್ಥೆಗಳು ಹಾಗೂ ವ್ಯವಸ್ಥೆಗಳ ನಡುವೆ ಸ್ಪರ್ಧೆಯನ್ನು ತೀವ್ರಗೊಳಿಸುವ ಗುರಿಯನ್ನು ಹೊಂದಿದೆ.

## ವಿಸ್ತೃತ ಸಂದರ್ಭ

ಧಾರ್ಮಿಕ ವಲಯದಲ್ಲಿ ಮೂಲಭೂತವಾದವು ಯಾವುದನ್ನು ಪ್ರತಿನಿಧಿಸುವುದೋ ಅಂತೆಯೇ, ರಾಜಕೀಯ ಚಿಂತನೆಯ ವಲಯದಲ್ಲಿ ನವ-ಉದಾರವಾದವು ಇತಿಹಾಸವನ್ನು ನಿರ್ಲಕ್ಷಿಸಿ ಮೂಲ ನಂಬಿಕೆಗಳು ಹಾಗೂ ಅನುಷ್ಠಾನಗಳು ಎನಿಸಿದವುಗಳ ಕಡೆಗೆ ಹಿಂತಿರುಗುವುದನ್ನು ಪ್ರತಿನಿಧಿಸುತ್ತದೆ. ನವ-ಉದಾರವಾದವು ಶಿಕ್ಷಣದಲ್ಲಿ ಮಾರುಕಟ್ಟೆ ತತ್ತ್ವಗಳನ್ನು ಅಳವಡಿಸುವುದು ಮಾತ್ರವಲ್ಲ; ವಿಚಾರಗಳು - ಅದರಲ್ಲಿಯೂ ರಾಜಕೀಯ ವಿಚಾರಗಳು - ಶಿಕ್ಷಣದಲ್ಲಿ ಕಲಿಕೆ ಹಾಗೂ ಅಭ್ಯಾಸಗಳಿಗೆ ಯಾವುದೇ ಸಂಬಂಧವಿಲ್ಲದವುಗಳು ಎಂದು ಭಾವಿಸುವುದರಲ್ಲಿಯೂ ಇದೆ. ನವ-ಉದಾರವಾದವು ಇಂದಿನ ಪ್ರಬಲ ಸಿದ್ಧಾಂತ ಎಂದು ನಾವು ತಿಳಿಯುವುದಾದರೆ, ಅದರ ಹಿಂದಿದ್ದ ಉದಾರವಾದದ ಐತಿಹಾಸಿಕ ಹಿನ್ನೆಲೆ, ವಿಚಾರಪರಂಪರೆಯಾಗಿ ಅದು ನೀಡಿದ ಭರವಸೆಗಳು ಹಾಗೂ ಅದರ ಸ್ವಯಂಕೃತ ವಿಸ್ಮರಣೆಗಳನ್ನು ಮೊದಲಿಗೆ ಒಪ್ಪಿಕೊಳ್ಳುವುದು ಬಿಟ್ಟು ನಮಗೆ ಬೇರೆ ದಾರಿಯಿಲ್ಲ. ಉದಾರವಾದದ ವಿಸ್ತೃತವಾದ ಇತಿಹಾಸವು ಇಂದಿನ ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳು ತಮ್ಮ ಭೌಗೋಳಿಕ ಗಡಿಗಳ ಒಳಗೆ ವ್ಯಕ್ತಿಗತ ಗೌರವ ಹಾಗೂ ಸಮಾನತೆಗಳನ್ನು ಸ್ಥಾಪಿಸುವಲ್ಲಿ ನಡೆಸಿದ ಹೋರಾಟ ಮಾತ್ರವಲ್ಲದೆ, ಇಂತಹ ಮೌಲ್ಯಗಳನ್ನು ಅಳವಡಿಸದಿರುವಂತಹ ವಸಾಹತುಗಳ ನಿಯಂತ್ರಣದ ಮೂಲಕ ಸಾಮ್ರಾಜ್ಯ-ವರ್ಧನೆ ಮಾಡುವ ಪ್ರಯತ್ನವನ್ನೂ ಒಳಗೊಳ್ಳುತ್ತದೆ. ಅದು ವಸಾಹತುಗಳಲ್ಲಿ ವಸಾಹತುಶಾಹಿಯ ವಿರುದ್ಧ ಇಂತಹ ಮೌಲ್ಯಗಳಿಗೆ ಆರಂಭಿಕ ಸ್ಥಳಾವಕಾಶವನ್ನು ಉಂಟುಮಾಡಿದ ಹೋರಾಟವೂ ಆಗಿದೆ. ಇಂತಹ ಉದಾರವಾದಿ ಅವಕಾಶವು ಬೇರೂರುವುದರ ಮುನ್ನವೇ ನವ-ಉದಾರವಾದಿ ನೀತಿಗಳು ಅದನ್ನು ಹೊಸಕಿಹಾಕಲಾರಂಭಿಸಿವೆ. ಇಂಗ್ಲೆಂಡಿನಲ್ಲಿ ಉದಾರವಾದದ ಆಗಮನ ಹಾಗೂ ವಸಾಹತು ಆಡಳಿತದಲ್ಲಿ ಅದರ ಶೋಷಣಾತ್ಮಕ ಪಾತ್ರ ಇವುಗಳ ನಡುವಿನ ಸಂಬಂಧವು ಉದಾರವಾದಿ ಸಿದ್ಧಾಂತಿಗಳಿಗೆ ಹಾಗೂ ಇತಿಹಾಸತಜ್ಞರಿಗೆ ಚರ್ಚಿಸಲು ಒಂದು ಮೆಚ್ಚಿನ ವಿಷಯವಂತೂ ಅಲ್ಲ. ಆದರೆ ನಮಗೆ ನವ-ಉದಾರವಾದಿ ನೀತಿಗಳ

ಸಮಕಾಲೀನ ಸಮರ್ಥನೆಯನ್ನು ಅರ್ಥ ಮಾಡಿಕೊಳ್ಳಲು ಬೇಕಾದ ಸುಳುಹುಗಳ ಹುಡುಕಾಟ ಮಾಡಲು ಇದು ಒಂದು ಮುಖ್ಯವಾದ ಕೊಂಡಿಯಾಗಿದೆ. ಹೊಸ ರೀತಿಯ ಸಾಮ್ರಾಜ್ಯ-ನಿರ್ಮಾಣ, ಪಾಶ್ಚಾತ್ಯ ಪ್ರಜಾಸತ್ತೆಗಳಲ್ಲಿನ ಭಿನ್ನಾಭಿಪ್ರಾಯದ ನಿಭಾವಣೆ ಹಾಗೂ ಹಿಂದಿನ ವಸಾಹತುಗಳಲ್ಲಿನ ಪ್ರಜಾಸತ್ತಾತ್ಮಕ ಆಶೋತ್ತರಗಳ ನಿಭಾವಣೆ ಇವುಗಳೆಲ್ಲವೂ ವಿವಿಧ ರಾಷ್ಟ್ರಗಳ ವ್ಯವಸ್ಥೆಯಲ್ಲಿ ನವ-ಉದಾರವಾದಿ ದೃಷ್ಟಿಕೋನವು ಪಡೆದಿರುವ ವ್ಯಾಪಕ ಪ್ರಭಾವಕ್ಕೆ ಕಾರಣವಾಗಿವೆ. ನವ-ಉದಾರವಾದಿ ನೀತಿಗಳು ಮಾರುಕಟ್ಟೆಯ ಮೂಲಭೂತವಾದಕ್ಕೆ ವಿಧೇಯವಾಗಿರುವುದನ್ನು ಬಯಸತೊಡಗಿದಾಗ, ಅವು ಪ್ರಜಾಪ್ರಭುತ್ವವನ್ನೂ ಮರುವ್ಯಾಖ್ಯಾನ ಮಾಡುತ್ತವೆ. ಪ್ರಜಾಪ್ರಭುತ್ವವನ್ನು ಬೆಂಬಲಿಸಲು ಕಣ್ಗಾವಲಿನ (surveillance) ಆಳ್ವಿಕೆ ಹಾಗೂ ಯುದ್ಧ ಅನುಸರಣೆಯು ಸಾಧನವಾಗಿರುವುದು ಈ ಉದಾರ ಮೌಲ್ಯಗಳ ಹೊಸ ದೃಷ್ಟಿಕೋನವನ್ನು ಸಾಕಷ್ಟು ಸ್ಪಷ್ಟಗೊಳಿಸುತ್ತವೆ. ಇಂತಹ ಪುನರ್ವ್ಯಾಖ್ಯಾನದ ಒಳಗೆ ಶಿಕ್ಷಣದ ಗುರಿಗಳು ಗಾಢವಾಗಿ ಸಿಕ್ಕಿಕೊಂಡಿವೆ.

ಧಾರ್ಮಿಕ ಮೂಲಭೂತವಾದದಂತೆಯೇ, ನವ-ಉದಾರವಾದವೂ ಸಹ ಅದನ್ನು ನಂಬಿದವರು ವಿಚಾರ ವಿನಿಮಯಗಳಲ್ಲಿ ಸಮಯ ಕಳೆಯದೆ ಕ್ರಿಯೆಗಳಲ್ಲಿ ತೊಡಗಬೇಕೆಂದು ಪ್ರೇರಿಸುತ್ತದೆ. ಹೀಗೆ, ನಿಜ ಜಗತ್ತಿನ ಸಂಗತಿಗಳ ಬಗ್ಗೆ ಚಿಂತನೆ, ವಿಚಾರವಿನಿಮಯ ಹಾಗೂ ಸಮರ್ಥನೀಯವಾದ ತೀರ್ಮಾನಗಳ ಒಂದು ಪ್ರಕ್ರಿಯೆಯಾಗಿ ಶಿಕ್ಷಣದ ತಾರ್ಕಿಕ (discursive) ಲಕ್ಷಣವನ್ನೂ ಸಹ ಬಿಟ್ಟುಕೊಡಲಾಗಿದೆ. ನವ-ಉದಾರವಾದಿ ಭರವಸೆಗೆ ಒಂದು ಆದರ್ಶ ಸ್ಥಿತಿ(utopia)ಯ ಹೊಳಪನ್ನು ನೀಡುವಂತಹ ನ್ಯಾಯಬದ್ಧ (righteousness) ಅಂಶವೂ ಇಲ್ಲಿ ಸೇರಿಕೊಂಡಿದೆ. ಧಾರ್ಮಿಕ ಮೂಲಭೂತವಾದಿಯು ಅತ್ಯಂತ ನ್ಯಾಯಯುತ ಮತ್ತು ಅತ್ಯುತ್ಕೃಷ್ಟ ಆಳ್ವಿಕೆಯ ಭರವಸೆಯಿಂದ ಹೇಗೆ ಪ್ರೇರಿತಗೊಳ್ಳುವನೋ ಹಾಗೆಯೇ, ನವ-ಉದಾರವಾದಿ ಮನಸ್ಸೂ ಸಹ, ವಿಶೇಷವಾಗಿ ತತ್ಕ್ಷಣವೇ ತಲುಪಬಲ್ಲ ಸಂದೇಶಗಳ ಮುಖಾಂತರ ಅಂತರಿಕ್ಷದ ಮೇಲೆ ನಿಯಂತ್ರಣ ಸಾಧಿಸುವ ಸಾಧನಗಳ ಬಗ್ಗೆ ಇರುವಂತಹ, ತಾಂತ್ರಿಕ-ಆದರ್ಶ ಸ್ಥಿತಿಯಿಂದ ಪ್ರೇರಿತಗೊಂಡಿದೆ. ತಾಂತ್ರಿಕ- ಆದರ್ಶ ಸ್ಥಿತಿಯನ್ನು ನಂಬುವವರು, ವಾಸ್ತವವಾಗಿ, ಪ್ರಜಾಪ್ರಭುತ್ವವನ್ನು ಸಂವಹನದ ವ್ಯಾಪ್ತಿಯಲ್ಲಿ ಸಮಾನತೆಯ ಅನುಷ್ಠಾನದೊಂದಿಗೆ ಸಮೀಕರಿಸುತ್ತಾರೆ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ನಡುವೆ ತಾಂತ್ರಿಕವಾಗಿ ಸುಲಭಗೊಳಿಸಲಾದ ಮತ್ತು ಆ ಮೂಲಕ ಸಂಬಂಧವನ್ನು ಕಲ್ಪಿಸಲಾದ ಸಂವಹನವು ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಸಾಧಿಸುವಲ್ಲಿ ಹಾಗೂ ಸ್ಪಂದಿಸುವಲ್ಲಿ ಶಿಕ್ಷಕರ ಕರ್ತೃತ್ವ ಹಾಗೂ ಸಹಜವಾಗಿ ನಡೆದುಕೊಳ್ಳುವ ಕೊರತೆಯನ್ನು ಇನ್ನಷ್ಟು ಹೆಚ್ಚು ಮಾಡುತ್ತದೆ. ಉನ್ನತ ಶಿಕ್ಷಣದಲ್ಲಿ, ನವ-ಉದಾರವಾದಿ ತಾಂತ್ರಿಕ-ಆದರ್ಶ ಸ್ಥಿತಿಯು ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯಲ್ಲಿ, ಶುಲ್ಕ ಹೆಚ್ಚಳ ಹಾಗೂ ಸಿಬ್ಬಂದಿಗಳನ್ನು

ವಜಾಮಾಡುವುದು ಮುಂತಾದ ಕ್ರಮಗಳಿಗೆ ಇಂಬು ಕೊಡುವಂತಹ, ಗಂಭೀರ ಏರುಪೇರುಗಳಲ್ಲಿ ಕೊನೆಗೊಂಡಿದೆ.

ಮಗು-ಕೇಂದ್ರಿತ ಬೋಧನಾ ವಿಧಾನಗಳಿಗೆ ಸಂಬಂಧ ಹೊಂದಿರುವ ಬೋಧನಶಾಸ್ತ್ರೀಯ ಆಧುನಿಕತಾವಾದವಾದರೋ ಸಮಾಜಕಲ್ಯಾಣ ರಾಜ್ಯದ ಸಂಸ್ಥಾಪನೆಗಾಗಿರುವ ಉದಾರ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ತನ್ನ ಬೇರುಗಳನ್ನು ಹೊಂದಿದೆ. ನವ-ಉದಾರವಾದದ ವಿಚಾರಪರಂಪರೆಯು ಹಿಂದಿನ ವಸಾಹತುಗಳಲ್ಲಿ ಸಮಾಜಕಲ್ಯಾಣ ರಾಜ್ಯಗಳಾಗಿ ಹೊರಹೊಮ್ಮುತ್ತಿರುವ ಅನೇಕ ರಾಷ್ಟ್ರಗಳು ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಗೆ ತಮ್ಮ ಆರ್ಥಿಕತೆಗಳನ್ನು ಅವುಗಳ ರಚನೆಯಲ್ಲೇ ಸರಿಹೊಂದಿಸುವಂತೆ ಒತ್ತಡವುಂಟುಮಾಡಿದೆ. ಈ ಪ್ರಕ್ರಿಯೆಯು, ವಿಶೇಷವಾಗಿ ಆರೋಗ್ಯ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಅಲ್ಲಿನ ಮಕ್ಕಳಿಗೆ ಪ್ರಭುತ್ವದಿಂದ ದೊರಕುವ ಸೇವೆಗಳಲ್ಲಿ ತೀವ್ರ ಕೊರತೆಯನ್ನುಂಟು ಮಾಡಿದೆ. ಅಂತಹ ಸೇವೆಗಳನ್ನು ಖಾಸಗಿ ಮದ್ಯವರ್ತಿಸಂಸ್ಥೆಗಳಿಗೆ ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ಹೊರಗುತ್ತಿಗೆ ನೀಡುವುದು ತೀರಾ ಸಾಮಾನ್ಯವಾಗಿದೆ. ಸಮಾಜದ ಅತಿ ಬಡವರ್ಗಗಳಿಗೆ ಮುಖ್ಯವಾಗಿ ಸರ್ಕಾರೇತರ ಸಂಸ್ಥೆಗಳಿಂದಲೇ ಸೇವೆ ನೀಡಲಾಗುತ್ತಿದೆ. ಪ್ರಭುತ್ವಕ್ಕೆ ಈ ಸೇವೆಗಳ ಗುಣಮಟ್ಟ ಅಥವಾ ಅವುಗಳ ವ್ಯಾಪ್ತಿಯು ಸಾಕಷ್ಟಿದೆಯೆ ಎಂಬುದನ್ನು ಉಸ್ತುವಾರಿ ಮಾಡುವ ನೇರ ಪಾತ್ರವೇ ಇಲ್ಲ. ವಿಪರ್ಯಾಸವೆಂದರೆ, ಸಹಸ್ರಮಾನದ ಅಭಿವೃದ್ಧಿ ಗುರಿಗಳ (millennium development goals) ಅನುಸರಣೆ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಯು ಶಾಸನವಾಗುವುದನ್ನು ಬೆಂಬಲಿಸುತ್ತಿರುವ ಕಾಲದಲ್ಲೇ ಮಕ್ಕಳಿಗೆ ತನ್ನ ರಕ್ಷಾಕವಚವನ್ನು ಒದಗಿಸುವ ಜವಾಬ್ದಾರಿಯಿಂದ ಪ್ರಭುತ್ವವು ಈ ರೀತಿ ದೂರಸರಿಯುವುದು ನಡೆದಿದೆ.

ನಾಗರಿಕರ ಹಕ್ಕು ಎಂಬುದು ಪ್ರಜಾಪ್ರಭುತ್ವದ ಪರಿಕಲ್ಪನೆಯಲ್ಲಿ ಮೂಲಭೂತವಾದದ್ದು. ಮಕ್ಕಳಿಗೆ ನೀಡುವ ಹಕ್ಕುಗಳು ಪ್ರೌಢ ನಾಗರಿಕರಿಗೆ ನೀಡುವ ಹಕ್ಕುಗಳ ಹಾಗೆ ಅಲ್ಲ ಎಂಬುದರ ಪೂರ್ಣ ಅರಿವು ಪ್ರಭುತ್ವಕ್ಕೆ ಇರುತ್ತದೆ ಎಂಬುದು ಯಾವುದೇ ಒಂದು ಉದಾರವಾದಿ-ಪ್ರಜಾಸತ್ತಾತ್ಮಕ ದೃಷ್ಟಿಕೋನದ ಇಂಗಿತವಾಗಿರುತ್ತದೆ. ಅದೇಕೆಂದರೆ ಮಕ್ಕಳು ತಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳುವಲ್ಲಿ ಜಾಗ್ರತರಾಗಿರುತ್ತಾರೆಂದು ನಿರೀಕ್ಷಿಸುವುದು ಸರಿಯಲ್ಲ ಅಥವಾ ತಮ್ಮ ಹಕ್ಕಿನ ಉಲ್ಲಂಘನೆಯಾದಾಗ ಅದಕ್ಕೆ ತಮ್ಮ ಅರ್ಹತೆಯನ್ನು ಸಮರ್ಥಿಸಿಕೊಳ್ಳಲೂ ಸಹ ಅವರಿಗೆ ಸಾಧ್ಯವಿಲ್ಲ. ಈ ಕಾರಣಗಳಿಂದಾಗಿ, ಪ್ರಭುತ್ವವು ತನ್ನದೇ ಆದ ಸಂಸ್ಥೆಗಳಲ್ಲಿ ಮಕ್ಕಳ ಹಕ್ಕುಗಳಿಗೆ ಮೂರ್ತರೂಪ ಕೊಡಬೇಕಾದ ಅಗತ್ಯವಿದೆ. ಅಂದರೆ, ಆ ಸೇವೆಗಳನ್ನು ಹೊರಗುತ್ತಿಗೆ ನೀಡಲಾಗದು ಅಥವಾ ಸ್ವಯಂಸೇವಾ ಅಥವಾ ಖಾಸಗಿ ಸಂಸ್ಥೆಗಳು ಹೊಂದಿರಬಹುದಾದ ಆತ್ಮಸಾಕ್ಷಿಗೆ ಅವುಗಳನ್ನು ಒಪ್ಪಿಸಲಾಗದು. ಈ ದೃಷ್ಟಿಕೋನದಿಂದ, ಮಕ್ಕಳ ಕಲ್ಯಾಣದ ವಲಯದಿಂದ ಪ್ರಭುತ್ವವು

ತನ್ನನ್ನು ತಾನು ಹಿಂತೆಗೆದುಕೊಳ್ಳುವ ಮತ್ತು ಅದಕ್ಕೆ ಮೀಸಲಾದ ಹಣಕಾಸು ಅನುದಾನಗಳನ್ನು ಕಡಿತಗೊಳಿಸುವ ಹಿನ್ನೆಲೆಯಲ್ಲಿ, ಮಕ್ಕಳ ಕಲ್ಯಾಣಕ್ಕೆಂದು ಹಕ್ಕು-ಆಧಾರಿತ ಮಾರ್ಗವನ್ನು ಅಳವಡಿಸಿಕೊಳ್ಳುವುದು ಸ್ಪಷ್ಟ ವಿರೋಧಾಭಾಸವಾಗಿದೆ. ಅಂತಹ ವಿರೋಧಾಭಾಸವನ್ನು, ಮಕ್ಕಳು ಅವಲಂಬಿಸಬಹುದಾದ ರೀತಿಯಲ್ಲಿ ಒಂದು ಉದಾರವಾದಿ ಪ್ರಭುತ್ವವು ಇನ್ನೂ ರೂಪಗೊಂಡು ಕಾರ್ಯನಿರ್ವಹಿಸಬೇಕಾಗಿದ್ದಂತಹ ಅಪ್ರಬುದ್ಧ ಪ್ರಜಾಪ್ರಭುತ್ವಗಳಲ್ಲಿ ಅದು ನವ-ಉದಾರವಾದದ ಮುನ್ನಡೆಯ ಲಕ್ಷಣ ಎಂದು ವರ್ಣಿಸಬಹುದು. ಈ ಹಿಂದೆ ಪ್ರಸ್ತುತಪಡಿಸಿದಂತಹ ನವ-ಉದಾರವಾದಿ ಪ್ರಭುತ್ವದ ನೀತಿಗಳು ಬೋಧನೆಯ ಮೇಲೆ ಮಾಡಿದ ಪರಿಣಾಮಗಳ ವಿಶ್ಲೇಷಣೆಯ ಜೊತೆಜೊತೆಯಲ್ಲಿ, ಮಕ್ಕಳ ಕಲ್ಯಾಣದ ವಿಷಯದಲ್ಲಿ ಪ್ರಭುತ್ವದ ಪಾತ್ರವು ಕಡಮೆಯಾಗುತ್ತಿರುವುದು ಶಿಕ್ಷಕರ ವೃತ್ತಿಸಂಬಂಧೀ ಸ್ಥಾನಮಾನದ ಅವನತಿಯಲ್ಲಿಯೂ ಒಂದು ಪ್ರಧಾನ ಪಾತ್ರ ವಹಿಸಿರುವುದನ್ನು ಕಾಣಬಹುದು.

**ಉಪಸಂಹಾರ**

ನವ-ಉದಾರವಾದದ ಪ್ರಾಬಲ್ಯವು ನಮ್ಮ ಕಾಲದ ಒಂದು ಮಹತ್ತ್ವದ ಐತಿಹಾಸಿಕ ಬೆಳವಣಿಗೆ. ನಾನು ಶಿಕ್ಷಣ, ಅದರ ನೀತಿ ಹಾಗೂ ಅನುಷ್ಠಾನ – ಇವೆರಡಕ್ಕೂ ಇರುವ ಅದರ ಸೂಚ್ಯಪರಿಣಾಮಗಳನ್ನು ಚರ್ಚಿಸಿದ್ದೇನೆ. ಆದರೆ ಇಲ್ಲಿನ ಸಂಕ್ಷಿಪ್ತ ಚರ್ಚೆಯು ಅದರ ಪೂರ್ಣಪ್ರಮಾಣದ ತಿಳುವಳಿಕೆಗಾಗಿ ಮಾಡಬಹುದಾದ ವಿಚಾರಣೆಯ ರೀತಿಯನ್ನು ಸೂಚಿಸಬಲ್ಲದು ಅಷ್ಟೇ. ಕೇವಲ ಭಾರಿ ಬಂಡವಾಳ ಹೂಡಿಕೆ ಹಾಗೂ ಸಂಯೋಜನೆಯಲ್ಲದೆ ಒಂದು ನೈತಿಕ ದೃಷ್ಟಿಯನ್ನು ಬಯಸುವ ಒಂದು ಸಾಮಾಜಿಕ ಚಟುವಟಿಕೆಯಾಗಿ ಶಿಕ್ಷಣವು ಪ್ರಭುತ್ವದ ಮೇಲೆ ಅವಲಂಬಿಸಿದೆ. ಆದ್ದರಿಂದಲೇ ಶಾಲೆಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವ ಬೋಧನೆ ಹಾಗೂ ಕಲಿಕೆಗಳ ಸಾಮಾಜಿಕ ಲಕ್ಷಣವನ್ನು ನಾವು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವಾಗ ಪ್ರಭುತ್ವದ ಲಕ್ಷಣ ಹಾಗೂ ಅದರಲ್ಲಿ ಆಗುತ್ತಿರುವ ಬದಲಾವಣೆಗಳು ಮಹತ್ವವನ್ನು ಪಡೆದುಕೊಳ್ಳುತ್ತವೆ. ಶಿಕ್ಷಕರು ತಮ್ಮ ಸ್ವಾಯತ್ತತೆ ಹಾಗೂ ತಮ್ಮ ವೃತ್ತಿಯ ಘನತೆಯನ್ನು ಕಳೆದುಕೊಂಡಿರುವುದಲ್ಲದೆ ಕಲಿಕೆಯನ್ನು ಹೆಚ್ಚು ಹೆಚ್ಚು ವರ್ತನವಾದಿ (behaviourism) ಪರಿಭಾಷೆಯಲ್ಲಿ ವ್ಯಾಖ್ಯಾನಿಸಲಾಗುತ್ತಿದೆ ಎಂಬುದನ್ನು ಈ ಚರ್ಚೆಯು ತೋರಿಸುತ್ತದೆ.

ದ್ವಿತೀಯ ವಿಶ್ವ ಸಮರದ ನಂತರದ ದಶಕಗಳಲ್ಲಿ ಪಠ್ಯಕ್ರಮದ ಸಿದ್ಧಾಂತ ಹಾಗೂ ಬೋಧನಾ ಅನುಷ್ಠಾನಗಳಲ್ಲಿ ಆದ ಪ್ರಗತಿಯು ನಿಂತಲ್ಲೇ ನಿಂತಂತಾಗಿದೆ ಅಥವಾ ಅದನ್ನು ವ್ಯರ್ಥವಾಗಿ ಕಳೆಯುವಂತದ್ದಾಗಿದೆ. ನವ-ಉದಾರವಾದವು ಸಮಾಜಕಲ್ಯಾಣದ ಒಂದು ಮಾರುಕಟ್ಟೆ ಮಾದರಿಯನ್ನು ಪ್ರೋತ್ಸಾಹಿಸುತ್ತದೆ. ಶಿಕ್ಷಣದಲ್ಲಿ ಅದು ಈಗಾಗಲೇ ಪ್ರಭುತ್ವವು ತನ್ನ ವಿಸ್ತಾರವಾದ ಜವಾಬ್ದಾರಿಗಳಿಂದ ಹಿಂದೆ ಸರಿಯುವಂತೆ ಮಾಡಿದೆ. ಹಿಂದಿನ ಉದಾರವಾದಿ ಪ್ರಜಾಸತ್ತಾತ್ಮಕ ಚಿಂತನೆ ಹಾಗೂ ಅನುಷ್ಠಾನಗಳ ಲಾಭಗಳನ್ನು

ಸಂರಕ್ಷಿಸಲು ನಾವು ಬೋಧನೆಯು ಒಂದು ಸಂಬಂಧಾತ್ಮಕ ಚಟುವಟಿಕೆ ಎಂಬ ಪರಿಕಲ್ಪನೆಯನ್ನು ಪುನರುಜ್ಜೀವನಗೊಳಿಸಲು ತೀರ್ಮಾನ ಮಾಡಬೇಕಾಗಿದೆ. ಅಧಿಕಾರಶಾಹಿ ಪಠ್ಯಕ್ರಮ ಅನುಸೂಚನೆಗಳನ್ನು ಅನುಸರಿಸುವುದರ ಮೂಲಕ ಮತ್ತು ನಿರೀಕ್ಷಿತ ಫಲಿತಾಂಶಗಳನ್ನು ಗುರಿಯನ್ನಾಗಿಸಿಕೊಳ್ಳುವುದರ ಮೂಲಕ ಶಿಕ್ಷಕರನ್ನು ಉತ್ತರದಾಯಿಗಳನ್ನಾಗಿ ಮಾಡುವ ಉದ್ದೇಶವನ್ನು ಪ್ರತಿರೋಧಿಸುವುದು ಅಂತಹ ನಿರ್ಧಾರದೊಂದು ಸೂಚ್ಯಪರಿಣಾಮವಾಗಿರುತ್ತದೆ.

## ಪರಾಮರ್ಶನೆಗಳು


Gray, John (2009): *Gray's Anatomy: Selected Writings* (London: Allen Lane).

Helperin, R and Ratteree (2003): "Where Have All the Teachers Gone? The Silent Crisis", *Prospects*, (33: 2), pp 133-38.

Kumar, K (1991-2005): *Political Agenda of Education* (New Delhi: Sage).

Macpherson, C B (1974): *Democratic Theory: Essays in Retrieval* (Oxford: Clarendon Press).

Stenhouse, L (1980): *Curriculum Research and Development in Action* (London: Heinemann).